

## ರೇಖಾ ಚಕ್ಕರ್!

ರಾಜ್ಯಸಭೆಯ ಒಟ್ಟು ಸದಸ್ಯರ ಸಂಖ್ಯೆ 250. ಈ ಹಿರಿಯರ ಸಭೆಗೆ 12 ಜನರನ್ನು ನೇಮಕ ಮಾಡಲು (ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ) ರಾಷ್ಟ್ರಪತಿ ಶಿಫಾರಸ್ಸು ಮಾಡುತ್ತಾರೆ. ಹೀಗೆ ನಾಮಕರಣಗೊಳ್ಳುವವರು ಕಲೆ, ಸಾಹಿತ್ಯ, ವಿಜ್ಞಾನ, ಶಿಕ್ಷಣ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರೇ ಇರಬೇಕು ಎನ್ನುವುದು ಸಂವಿಧಾನದ ಸೆಕ್ಷನ್ 80ರ ನಿಯಮ. ಕಲೆಯ ಹೆಸರಿನಲ್ಲಿ ಸಿನಿಮಾ ಕ್ಷೇತ್ರದ ಹಲವರು ಈವರೆಗೆ ರಾಜ್ಯಸಭೆಯಲ್ಲಿ ಸೇವೆ ಸಲ್ಲಿಸಿದ್ದಾರೆ. 1952ರಲ್ಲಿ ಪ್ರಥ್ವಿರಾಜ್ ಕಪೂರ್‌ರಿಂದ ಹಿಡಿದು ಈಗ ಚಿತ್ರ ನಟಿ ರೇಖಾವರೆಗೆ ಹೀಗೆ ನಾಮಕರಣಗೊಂಡವರೆಲ್ಲ ಖ್ಯಾತನಾಮರೇ. ನರ್ಗಿಸ್ ದತ್ (1980), ವೈಜಯಂತಿಮಾಲಾ (1993), ಮೃಣಾಲ್ ಸೇನ್, ಶಬನಾ ಆಜ್ಮಿ (1997), ಲತಾ ಮಂಗೇಶ್ಕರ್ (1999), ದಾರಾ ಸಿಂಗ್, ಹೇಮಮಾಲಿನಿ (2003), ಶ್ಯಾಮ್ ಬೆನೆಗಲ್ (2006)– ಹೀಗೆ ಈ ಪಟ್ಟಿಯಲ್ಲಿ ಅತಿರಥರಿದ್ದರು. ಆದರೆ ರೇಖಾ ತರಹ ಈವರೆಗೆ ಯಾರೂ ರಾಜ್ಯಸಭೆ ಅಧಿವೇಶನದ ಬಗ್ಗೆ ಉದಾಸೀನ ಮಾಡಿದವರಿಲ್ಲ! ಇವರೆಲ್ಲರೂ ಶೇಕಡಾ 55ಕ್ಕಿಂತ ಹೆಚ್ಚು ಅಧಿವೇಶನ ಕಲಾಪಗಳಲ್ಲಿ ಭಾಗವಹಿಸಿದವರೇ. ಆದರೆ 2012ರಲ್ಲಿ ನಾಮಕರಣಗೊಂಡ ರೇಖಾ, ಈವರೆಗೆ ಶೇ.4ರಷ್ಟು ಮಾತ್ರ ಕಲಾಪಗಳಲ್ಲಿ ಪಾಲ್ಗೊಂಡಿದ್ದಾರೆ!

ರೇಖಾ ರಾಜ್ಯಸಭೆಗೆ ನಾಮಕರಣಗೊಂಡ ಬಳಿಕ ಒಟ್ಟು ಐದು ಅಧಿವೇಶನಗಳು ನಡೆದಿವೆ. ಫೆಬ್ರವರಿಯ ಚಳಿಗಾಲದ ಅಧಿವೇಶನದಲ್ಲಿ ಒಂದು ದಿನವೂ ರೇಖಾ ಪತ್ತೆಯಿಲ್ಲ. ಈ ಸಲದ ಬಜೆಟ್ ಅಧಿವೇಶನದಲ್ಲಿಯೂ ಹೀಗೇ ಚಕ್ಕರ್ ಹಾಕಿದ್ದಕ್ಕೆ ಬೇರೆ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ ಬಳಿಕ, ಕಳೆದ ವಾರ ಮೊದಲ ಸಹಿ ಹಾಕಿದ್ದಾರೆ. ಕೈಯಲ್ಲಿ ಸಿನಿಮಾಗಳಿಲ್ಲ; ರಾಜ್ಯಸಭೆಗೂ ಬರುವುದಿಲ್ಲ– ಎಂದರೆ ಈ ನಟೀಮಣಿಗೆ ಬೇರೆ ಯಾವ ಘನಂದಾರಿ ಕೆಲಸವಿದೆ? ಎನ್ನುವುದು ಎಲ್ಲರ ಸಹಜ ಪ್ರಶ್ನೆ. ಸಮಾಜವಾದಿ ಪಕ್ಷದಿಂದ ರಾಜ್ಯಸಭೆಗೆ ಆಯ್ಕೆಯಾದ ಜಯಾ ಬಚ್ಚನ್‌ಗೆ ಪ್ರತಿಸ್ಪರ್ಧಿ ಎಂಬಂತೆ ಹಿಂದಿನ ಯುಪಿಎ ಸರ್ಕಾರ ರೇಖಾರನ್ನು ನಾಮಕರಣ ಮಾಡಿತ್ತು. ಶೇಕಡಾ 57ರಷ್ಟು ಅಧಿವೇಶನಕ್ಕೆ ಹಾಜರಾಗಿರುವ ಜಯಾ, ನೂರಾರು ಪ್ರಶ್ನೆಗಳನ್ನು ಕೇಳಿ, ಹಲವು ಚರ್ಚೆಗಳಲ್ಲೂ ಭಾಗವಹಿಸಿದ್ದಾರೆ. ಜಯಾ ಬಚ್ಚನ್ ಸಾಧನೆಯ ಎದುರು, ರೇಖಾ ಲೆಕ್ಕಕ್ಕೇ ಇಲ್ಲ.

## ರಾಬಿನ್ 'ದಿ ಗ್ರೇಟ್'



1995ರಲ್ಲಿ ಕಮಲಹಾಸನ್ ನಟಿಸಿದ 'ಅವ್ವೈ ಷಣ್ಮುಖಿ' ತಮಿಳು ಅಥವಾ 'ಚಾಚಿ 420' ಹಿಂದಿ ಸಿನಿಮಾ ನೀವು ನೋಡಿಯೇ ಇರುತ್ತೀರಿ. ಚಿತ್ರದಲ್ಲಿ ಕಮಲಹಾಸನ್, ಹೀರೊ ಮತ್ತು ಮನೆ ಕೆಲಸದಾಕೆಯ ದ್ವಿಪಾತ್ರದಲ್ಲಿ ನಟಿಸಿದ್ದು, ರಾಜ್ಯಪ್ರಶಸ್ತಿಯೂ ಲಭಿಸಿತು. ಅದರಲ್ಲೂ ಮನೆಕೆಲಸದಾಕೆಯ ಪಾತ್ರದ ಮೇಕಪ್ ಭರ್ಜರಿ ಸುದ್ದಿಯಾಗಿತ್ತು. ಅದಕ್ಕೂ 2 ವರ್ಷ ಮುಂಚೆ ಇಂಗ್ಲಿಷ್‌ನಲ್ಲಿ ಬಂದ 'ಮಿಸೆಸ್ ಡೌಟ್‌ಫೈರ್' ಸಿನಿಮಾದ ತದ್ರೂಪಿಯೇ ಅವ್ವೈ ಷಣ್ಮುಖಿ. ಆ್ಯನ್ ಫೈನ್ ಬರೆದ ಕಾದಂಬರಿ ಆಧಾರಿತ ಮೂಲ ಇಂಗ್ಲಿಷ್ ಚಿತ್ರದಲ್ಲಿ ಡಬಲ್‌ರೋಲ್ ಮಾಡಿದಾತ ರಾಬಿನ್ ವಿಲಿಯಮ್ಸ್. 1993ರಲ್ಲಿ ಕೇವಲ ಒಂದು ಕೋಟಿ ಡಾಲರ್ ವೆಚ್ಚದಲ್ಲಿ ತಯಾರಾಗಿ, 22.5 ಕೋಟಿ ಡಾಲರ್ ಹಣ ಬಾಚಿಕೊಂಡ 'ಮಿಸೆಸ್ ಡೌಟ್‌ಫೈರ್', ಆ ವರ್ಷ 'ಜುರಾಸಿಕ್ ಪಾರ್ಕ್' ನಂತರದ ಅತ್ಯಧಿಕ ಆದಾಯ ಗಳಿಸಿದ ಚಿತ್ರವದು. (ಚಿತ್ರದ ಮೇಕಪ್ ಕಲಾವಿದನಿಗೆ ಆಸ್ಕರ್ ಪ್ರಶಸ್ತಿಯೂ ಲಭಿಸಿತ್ತು.) ಕಳೆದ ವಾರ 63ರ ಹರೆಯದಲ್ಲಿ ಜಗತ್ತಿಗೆ ವಿದಾಯ ಹೇಳಿದ ರಾಬಿನ್ ವಿಲಿಯಮ್ಸ್, ಹಾಲಿವುಡ್‌ನ ಅಪ್ರತಿಮ ನಟ! ಹಾಸ್ಯ, ಪೋಷಕ ಪಾತ್ರ, ವಿಲ್ಲನ್– ಹೀಗೆ ವೈವಿಧ್ಯಮಯ ಪಾತ್ರಗಳಲ್ಲಿ ನಟಿಸಿದ ರಾಬಿನ್ ವಿಲಿಯಮ್ಸ್, ಸಾಮಾಜಿಕ ಕಾಳಜಿಯಲ್ಲೂ ಮುಂದಿದ್ದ.

ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ರಾಬಿನ್, 1978ರಲ್ಲಿ ಟೀವಿ ಷೋ ಮೂಲಕ ವೃತ್ತಿಜೀವನ ಆರಂಭಿಸಿದ. ಆದರೆ **stand up comedy** ಕಲಾವಿದನಾಗಿ ಈತ ಪ್ರಸಿದ್ಧಿಗೆ ಬಂದದ್ದು 1987ರಲ್ಲಿ. ಆ ಬಳಿಕ ಟೀವಿ ಸೀರಿಯಲ್, ಸಿನಿಮಾ, ರಂಗಭೂಮಿ ಎಲ್ಲದರಲ್ಲೂ ಮಿಂಚಿದ ರಾಬಿನ್ ಜೊತೆ ಸ್ಟೀವನ್ ಸ್ಪೀಲ್‌ಬರ್ಗ್‌ರಂತಹ ಖ್ಯಾತನಾಮ ನಿರ್ದೇಶಕರೂ ಚಿತ್ರಕಥೆಗೆ ಸಂಬಂಧಿಸಿ ಸಲಹೆ ಕೇಳುತ್ತಿದ್ದರು.

1987ರಲ್ಲಿ ಅಮೆರಿಕದ ಏರ್‌ಫೋರ್ಸ್ ರೇಡಿಯೊ ಡಿಜೆ ಯ ಪಾತ್ರವೊಂದರಲ್ಲಿ ಸ್ಮರಣೀಯ ಅಭಿನಯ ನೀಡಿದಾಗ ಆಸ್ಕರ್‌ಗೆ ನಾಮಕರಣಗೊಂಡಿದ್ದ ರಾಬಿನ್, 89ರಲ್ಲಿ ಮತ್ತೆ ಬೋರ್ಡಿಂಗ್ ಸ್ಕೂಲ್ ಶಿಕ್ಷಕನ ಪಾತ್ರಕ್ಕೆ ಎರಡನೆಯ ಬಾರಿ ಆಸ್ಕರ್ ಸ್ಪರ್ಧೆಯ ಪಟ್ಟಿ ಸೇರಿದ. ಆದರೆ ಆಸ್ಕರ್ ಪ್ರಶಸ್ತಿ ಗೆಲ್ಲಲು ಆತ ಮತ್ತೆ ಎಂಟು ವರ್ಷ ಕಾಯಬೇಕಾಯಿತು. 97ರಲ್ಲಿ ತೆರೆಗೆ ಬಂದ **good will hunting** ರಾಬಿನ್‌ಗೆ ಅತ್ಯುತ್ತಮ ಪೋಷಕ ನಟನೆಯ ಆಸ್ಕರ್ ಪ್ರಶಸ್ತಿ ಗೆದ್ದುಕೊಟ್ಟಿತು. ಒಟ್ಟು 9 ವಿಭಾಗಗಳಲ್ಲಿ ಆಸ್ಕರ್‌ಗೆ ನಾಮಕರಣಗೊಂಡಿದ್ದ ಈ ಚಿತ್ರಕ್ಕೆ ಎರಡು ಆಸ್ಕರ್ (ಇನ್ನೊಂದು ಅತ್ಯುತ್ತಮ ಚಿತ್ರಕಥೆ) ಲಭಿಸಿತ್ತು. ಸದಭಿರುಚಿಯ ಹಾಸ್ಯ ಮತ್ತು ಭಾಷೆಯ ಮೇಲಿನ ಪ್ರಭುತ್ವದಿಂದಾಗಿ ರಾಬಿನ್ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65